# ಶುಂಗರು ಮತ್ತು ಕಣ್ವರು

## ಮೌರ್ಯರ ಉತ್ತರಾಧಿಕಾರಿಗಳು

# ಮೌರ್ಯರ ಪತನಾನಂತರ ಏನಾಯಿತು?

- ಮೌರ್ಯ ಸಾಮ್ರಾಜ್ಯದ ಪತನದೊಂದಿಗೆ ಭಾರತದಲ್ಲಿ ಮತ್ತೆ ರಾಜಕೀಯ ಅನೈಕ್ಯತೆ ಏರ್ಪಟ್ಟಿತು
- ಇದರಿಂದಾಗಿ ಭಾರತದ ವಾಯುವ್ಯ ಗಡಿಭಾಗದ ಕಣಿವೆಗಳ ಮೂಲಕ ಮತ್ತೆ ವಿದೇಶಿಯರು ದಾಳಿ ಮಾಡಲಾರಂಭಿಸಿದರು
- ಗಡಿ ಭಾಗಗಳಲ್ಲಿದ್ದ ಗಾಂಧಾರ, ಶಾಕಲ ಮುಂತಾದ ಪ್ರದೇಶಗಳ ಮೇಲೆ ವಿದೇಶಿಯರು ಹತೋಟಿ ಹೊಂದಿ, ದಕ್ಷಿಣದ ರಾಜ್ಯಗಳು ಮೌರ್ಯರ ಪ್ರಭುತ್ವದಿಂದ ಸ್ವತಂತ್ರಗೊಂಡವು

# ಶುಂಗರು

- ಮೂಲಾಧಾರಗಳು:- ಬಾಣ ಕವಿಯ ಹರ್ಷಚರಿತ, ತಾರಾನಾಥನ ಬರವಣಿಗೆಗಳು, ಪುರಾಣಗಳು
- ಮೌರ್ಯ ಸಂತತಿಯ ಕೊನೆಯ ದೊರೆಯಾದ ಬೃಹದ್ರಥನ ಸೇನಾಧಿಕಾರಿಯಾದ ಪುಷ್ಯಮಿತ್ರನು ಸೈನ್ಯದ ಸಮ್ಮುಖದಲ್ಲಿಯೇ ಮೌರ್ಯ ಸಾಮ್ರಾಟನನ್ನು ಕೊಲೆಗೈದು ಶುಂಗ ಸಂತತಿಯನ್ನು ಸ್ಥಾಪಿಸಿದ
- ಕೆಲವು ವಿದ್ವಾಂಸರು ಶುಂಗರು ಮೂಲತಃ ಇರಾನಿಯನ್ನರು ಎಂದು ಅಭಿಪ್ರಾಯಪಡುತ್ತಾರೆ

## ಅದಕ್ಕೆ ಅವರು ಕೊಡುವ  ಆಧಾರವೆಂದರೆ:-

- ಶುಂಗ ರಾಜರು ತಮ್ಮ ಹೆಸರಿನ ಕೊನೆಯಲ್ಲಿ "ಮಿತ್ರ’ ಎಂಬ ಉಪನಾಮ ಹೊಂದಿರುವುದು
- ಇರಾನಿ ಭಾಷೆಯಲ್ಲಿ ಮಿತ್ರ ಎಂದರೆ “ಸೂರ್ಯ’  ಎಂದರ್ಥ

# ವಿವಿಧ ಮೂಲಗಳು

- ಬೌದ್ಧ ಮೂಲಗಳು ಶುಂಗರು ಮೌರ್ಯರ ಸಂಬಂಧಿಗಳಾಗಿದ್ದು, ಪುಷ್ಯಮಿತ್ರನು ಶುಂಗ ವಂಶದ ಸ್ಥಾಪಕನೆಂದು ತಿಳಿಸುತ್ತವೆ.
- ಕಾಳಿದಾಸನ"ಮಾಳವಿಕಾಗ್ನಿಮಿತ್ರ 'ವು ಪುಷ್ಯಮಿತ್ರನು “ಬೈಂಬಿಕ' ಅಥವಾ ಬಿಂಬಸಾರ ಸಂತತಿಗೆ ಸೇರಿದವನೆಂದು ತಿಳಿಸುತ್ತದೆ.
- ಮಹಾಭಾಷ್ಯವು ಶುಂಗರು ಬ್ರಾಹ್ಮಣರೆಂದು ತಿಳಿಸುತ್ತದೆ.

# ನಿಜವಾದ ಮೂಲ ಯಾವುದು?

- ಅಯೋಧ್ಯೆಯ ಬಳಿ ದೊರೆತಿರುವ ಶಾಸನ ಮತ್ತು ಪಾಣಿನಿಯ ಗ್ರಂಥಗಳನ್ನಾಧರಿಸಿ ಕೆ.ಪಿ. ಜೇಸ್ವಾಲ್‌ರವರು ಶುಂಗರು ಬ್ರಾಹ್ಮಣ ಭಾರದ್ವಜ ಗೋತ್ರದ ಬೈಂಬಿಕ ಸಂತತಿಗೆ ಸೇರಿದವರೆಂದು ಅಭಿಪ್ರಾಯಪಟ್ಟಿದ್ದಾರೆ.
- ಈ ಅಭಿಪ್ರಾಯವು ಬಹುಸಂಖ್ಯಾತರ ಸಮ್ಮತಕ್ಕೆ ಒಳಗಾಗಿದೆ

# ಶುಂಗರ ವಂಶಾವಳಿ – ವಿವಿಧ ಮೂಲಗಳಿಂದ ಸಂಗ್ರಹಿತ

1. **ಪುಷ್ಯಮಿತ್ರ ಶುಂಗ - 185–149 BCE**
2. **ಅಗ್ನಿಮಿತ್ರ - 149–141 BCE**
3. **ವಸುಜ್ಯೇಷ್ಠ - 141–131 BCE**
4. **ವಸುಮಿತ್ರ - 131–124 BCE**
5. **ಭದ್ರಕ - 124–122 BCE**
6. **ಪುಲಿಂದಕ - 122–119 BCE**
7. **ಘೋಷ - 119-108 BCE**
8. **ವಜ್ರಮಿತ್ರ - 108-94 BCE**
9. **ಭಗಭದ್ರ - 94-83 BCE**
10. **ದೇವಭೂತಿ - 83–73 BCE**

# ಪುಷ್ಯಮಿತ್ರ ಶುಂಗ

- ಇವನು ಮೌರ್ಯ ಸಾಮ್ರಾಟರ ಕೊನೆಯ ಅರಸ ಬೃಹದ್ರಥನನ್ನು ಕೊಲ್ಲುವ ಮೂಲಕ ಶುಂಗ ಸಂತತಿ" ಸ್ಥಾಪನೆ ಮಾಡಿದನು.
- ಅವನು ವಿದರ್ಭ ರಾಜ್ಯದೊಡನೆ ಯುದ್ಧ ಮಾಡಿ ಶತ್ರುವನ್ನು ಸೋಲಿಸಿ ಅವನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡನು.

# ಇದನ್ನು ಓದಿಕೊಳ್ಳಿ

- ಹಾಥೀಗುಂಪಾ ಶಾಸನ: ಪುಷ್ಯಮಿತ್ರನ ಸಮಕಾಲೀನನಾದ ಕಳಿಂಗದ ಖಾರವೇಲನು ಪಾಟಲಿಪುತ್ರದ ಮೇಲೆ ತನ್ನ 10ನೇ ವರ್ಷದಲ್ಲಿ ಧಾಳಿ ಮಾಡಿ ಪುಷ್ಯಮಿತ್ರನನ್ನು ಸೋಲಿಸಿ ಹಿಂದೆ ನಂದರಾಜನು ಕಳಿಂಗದಿಂದ ಕೊಳ್ಳೆ ಹೊಡೆದಿದ್ದ ಜೈನ ಪ್ರತಿಮೆಯನ್ನು ವಾಪಾಸು ತಂದನೆಂದು ತಿಳಿಸುತ್ತದೆ.
- ಆದರೆ  ಪುಷ್ಯಮಿತ್ರನು ಖಾರವೇಲನ ಸಮಕಾಲೀನನಲ್ಲವೆಂಬ ವಾದವಿದೆ

- ಗ್ರೀಕರು ತಾವು ಗೆದ್ದ ಪ್ರದೇಶಗಳನ್ನು ಬಹುಕಾಲ ಉಳಿಸಿಕೊಳ್ಳಲಾಗಲಿಲ್ಲ. ಏಕೆಂದರೆ ಸ್ಥಳೀಯ ವಿರೋಧ ಹಾಗೂ ಪುಷ್ಯಮಿತ್ರನ ಸೈನಿಕ ದಾಳಿಗಳು ಅವರನ್ನು ಹಿಮ್ಮೆಟ್ಟಿಸಿದವು
- ಪುಷ್ಯಮಿತ್ರನು ಅಯೋಧ್ಯೆ ಭಾಗವು ಸೇರಿದಂತೆ ಕಳೆದುಹೋಗಿದ್ದ ಎಲ್ಲ ಪ್ರದೇಶಗಳನ್ನು ಪಡೆಯಲು ಅವನ ಮಗ ಅಗ್ನಿಮಿತ್ರ ಮತ್ತು ಮೊಮ್ಮಗ ವಸುಮಿತ್ರರು ಕಾರಣರಾದರು.
- ಅಗ್ನಿಮಿತ್ರ ಹಾಗೂ ಅವನ ಮಗ ವಸುಮಿತ್ರರು ಗ್ರೀಕರನ್ನು ಸಂಪೂರ್ಣವಾಗಿ ಸೋಲಿಸಿ ಪಂಜಾಬ್ ಪ್ರಾಂತ್ಯಕ್ಕೆ ದೂಡಿದರು.
- ಗ್ರೀಕರ ಮೇಲಿನ ಜಯದ ನೆನಪಿಗಾಗಿ ಎರಡು ಅಶ್ವಮೇಧ ಯಾಗಗಳ ಆಚರಣೆ.
- ಪುಷ್ಯಮಿತ್ರನು ಸು. 36 ವರ್ಷಗಳ ಕಾಲ ಆಳ್ವಿಕೆ ನಡೆಸಿದನು.

# ಬ್ರಾಹ್ಮಣ ಧರ್ಮದ ಪುನಶ್ಚೇತನ

- ಮೌರ್ಯರ ಕಾಲದಲ್ಲಿ ಸ್ಥಗಿತಗೊಂಡಿದ್ದ ಬ್ರಾಹ್ಮಣ ಧರ್ಮದ ಆಚರಣೆಗಳಾದ ಅಶ್ವಮೇದ ಯಾಗ ಮತ್ತೆ ಜಾರಿಯಲ್ಲಿ ತಂದನು.
- ದ್ದಿವ್ಯಾವಧಾನ:- ಪುಷ್ಯಮಿತ್ರನು ಬೌದ್ಧ ಧರ್ಮದ ತೀವ್ರ ದ್ವೇಷಿಯಾಗಿದ್ದ. ಬೌದ್ಧ ಧರ್ಮದ ಮೂಲೋಚ್ಚಾಟನೆಯ ಉದ್ದೇಶ ಹೊಂದಿದ್ದು ಬೌದ್ದ ಬಿಕ್ಷುಗಳನ್ನು ಸುಡಿಸಿದನು &ಬೌದ್ದ ಬಿಕ್ಷುವನ್ನು ಕೊಂದವರಿಗೆ ಬಹುಮಾನ ನೀಡಿದನೆಂದು ತಿಳಿಸುತ್ತದೆ
- ಈ ಅಂಶವನ್ನು ಟಿಬೆಟ್‌ನ ಇತಿಹಾಸಕಾರ ತಾರಾನಾಥನು ಪ್ರಸ್ತಾಪಿಸಿದ್ದಾನೆ.
- ಆದರೆ, ಬಾರ್ಹಾತ್ ಬೌದ್ಧ ಸ್ತೂಪದ ನಿರ್ಮಾಣ ಹಾಗೂ ಸಾಂಚಿ ಮತ್ತು ಬಚ್ರ ಸ್ತೂಪಗಳು ರಾಜನಿಂದ ಪ್ರೋತ್ಸಾಹ ಪಡೆದಿದ್ದವು

# ಪುಷ್ಯಮಿತ್ರನ ಉತ್ತರಾಧಿಕಾರಿಗಳು

- ಪುಷ್ಯಮಿತ್ರನ ನಂತರ ಅವನ ಮಗ ಅಗ್ನಿಮಿತ್ರನು ಅಧಿಕಾರಕ್ಕೆ ಬಂದನು
- ಇವನು ತನ್ನ ತಂದೆಯ ಕಾಲದಲ್ಲೇ ವಿಧಿಶದ ರಾಜಪ್ರತಿನಿಧಿಯಾಗಿದ್ದನು
- ಗ್ರೀಕರನ್ನು ಹೊಡೆದಟ್ಟುವಲ್ಲಿ ಅಗ್ನಿಮಿತ್ರ ಮತ್ತು ಅವನ ಮಗ ವಸುಮಿತ್ರನ ಪಾತ್ರ ಪ್ರಧಾನವಾಗಿತ್ತು.

# ಕಾಳಿದಾಸನ “ಮಾಳವಿಕಾಗ್ನಿಮಿತ್ರ'

- ನಾಟಕದ ನಾಯಕನು  ಅಗ್ನಿಮಿತ್ರನೇ ಆಗಿದ್ದನು
- ಕಾಳಿದಾಸನು ಈ ಕೃತಿಯಲ್ಲಿ ಅಗ್ನಿಮಿತ್ರನು ಆಡಳಿತದ ಸುಗಮತೆಗಾಗಿ ಮಂತ್ರಿಪರಿಷತ್ತು ಮತ್ತು ಅಮಾತ್ಯಪರಿಷತ್ತು ಎಂಬ ಎರಡು ಸಭೆಗಳನ್ನೊಂದಿದ್ದನೆಂದು ತಿಳಿಸುತ್ತಾನೆ.

# ಭಗ ಅಥವಾ ಭಾಗಭದ್ರ

- ಅಗ್ನಿಮಿತ್ರನ ಉತ್ತರಾಧಿಕಾರಿ
  ಇವನು ಬೆಸ್ನಗರದಲ್ಲಿ ಗರುಡ ಶಿಲೆಯನ್ನು ಸ್ಥಾಪಿಸಿ ಅದರ ಮೇಲೆ ಶಾಸನವೊಂದನ್ನು ಕೊರೆಸಿದ್ದಾನೆ.
- ಈ ಶಾಸನದಲ್ಲಿ ಗ್ರೀಕ್ ದೊರೆ ಆಂಟಿಯಾಲ್ಕಿಡಸ್‌ನ ಆಸ್ಥಾನದಿಂದ ಹಿಲಿಯೊಡೊರಸ್ ಎಂಬ ರಾಯಭಾರಿಯು ಭಾಗಭದ್ರನ ಆಸ್ಥಾನಕ್ಕೆ ಬಂದಿದ್ದನೆಂದೂ, ಅವನು ವೈಷ್ಣವ ಪಂಥಕ್ಕೆ ಸೇರಿದವನಾಗಿದ್ದನು ಎಂದು ತಿಳಿಸುತ್ತದೆ
- ಇದು ಆ ಕಾಲದಲ್ಲಿ ಶುಂಗರು ಇಂಡೋ-ಗ್ರೀಕರು ನಡುವೆ ಮೈತ್ರಿಯನ್ನು ಹೊಂದಿದ್ದರೆಂದು ಹಾಗೂ ಗ್ರೀಕರು ವೈಷ್ಣವ ಧರ್ಮವನ್ನು ಅನುಸರಿಸುತ್ತಿದ್ದರೆಂದು ತಿಳಿಸುತ್ತದೆ

# ಶುಂಗರ ಒಟ್ಟು ಕಾಲಾವಧಿ & ಕೊನೆಯ ಅರಸ

- ಪುರಾಣಗಳು ಶುಂಗರ 10 ದೊರೆಗಳು 112 ವರ್ಷಗಳ ಕಾಲ ಆಳ್ವಿಕೆ ನಡೆಸಿದರೆಂದು ತಿಳಿಸುತ್ತವೆ
- ಕೊನೆಯ ದೊರೆ ದೇವಭೂತಿಯು ಅತಿ ದುಷ್ಟನಾಗಿದ್ದನು.
- ಇವನು ಬ್ರಾಹ್ಮಣ ಅಮಾತ್ಯರ ಕೈಗೊಂಬೆಯಾಗಿದ್ದನು.
- ಕೊನೆಗೆ ದೇವಭೂತಿಯ ಬ್ರಾಹ್ಮಣ ಮಂತ್ರಿಯಾದ ವಾಸುದೇವ ಕಣ್ಣನು ರಾಜನನ್ನು ಕೊಲೆಗೈದು ಕಣ್ವ ವಂಶವನ್ನು ಸ್ಥಾಪಿಸಿದನು

# ಕಳಿಂಗದ ಚೇದಿಗಳು

- ಅಶೋಕನ ಕಾಲದಲ್ಲಿ ಮೌರ್ಯರ ವಶವಾಗಿತ್ತು
- ಶುಂಗರ ಕಾಲಕ್ಕೆ ಚೇದಿಗಳ ಆಳ್ವಿಕೆ ಏರ್ಪಟ್ಟಿತು
- ಸ್ಥಾಪಕ – ಮಹಾಮೇಘವಾಹನ
- ಎರಡನೆ ಅರಸ – ವಕ್ರದೇವ
- ನಂತರ ಕಾರವೇಲನು ಪಟ್ಟಕ್ಕೆ ಬಂದನು

# ಕಾರವೇಲ – ಶ್ರೇಷ್ಠ ಅರಸ

- ಹಾಥಿಗುಂಫ ಶಾಸನ ಪ್ರಮುಖ ಆಧಾರ
- ಕಟಕ್ ಬಳಿಯ ಉದಯಗಿರಿಯಲ್ಲಿದೆ
- ಆನೆಯ ಮುಖದಂತಿರುವ ಗುಹಾಲಯದ ಬಳಿ ಇರುವ ಕಾರಣ ಹಾಥಿಗುಂಫಾ ಎಂಬ ಹೆಸರು
- ಕಾರವೇಲನ ವ್ಯಕ್ತಿತ್ವ ಮತ್ತು  ಜೀವನ ಸಾಧನೆಗಳ ಸಂಪೂರ್ಣ ವಿವರಣೆ ಇದರಲ್ಲಿದೆ
- ಆದರೆ, ಶಾಸನದ ನಿಖರ ಕಾಲದ ಬಗ್ಗೆ ಗೊಂದಲವಿದೆ

# ಶಾಸನದ ವಿವರಗಳು

- ಕಾರವೇಲನು ೨೩ನೇ ವಯಸ್ಸಿಗೆ ಪಟ್ಟಕ್ಕೆ ಬಂದು, ೧೫ ವರ್ಷಗಳ ಕಾಲ ಆಳಿದನು
- ಹಾಥಿಗುಂಪಾ ಶಾಸನದಲ್ಲಿ ಅವನ ಆಳ್ವಿಕೆಯ ಪ್ರಮುಖ ಘಟನೆಗಳ ವಿವರಣೆ ನೀಡಲಾಗಿದೆ:- ಮೊದಲ ವರ್ಷ - ರಾಜಧಾನಿ ಭುವನೇಶ್ವರದ ನಿರ್ಮಾಣ
- ಎರಡನೇ ವರ್ಷ - ಶಾತಕರ್ಣಿಯ ವಿರುದ್ಧ ಯುದ್ಧ
- ನಾಲ್ಕನೇ ವರ್ಷ - ರಾಷ್ಟ್ರಕರು & ಭೋಜಕರ ವಿರುದ್ಧ ಗೆಲುವು
- ಐದನೇ ವರ್ಷ - ನಂದರಾಜನ ಕಾಲದ ನೀರಾವರಿ ಕಾಲುವೆಯ ವಿಸ್ತರಣೆ

# ಮುಂದುವರಿದಿದೆ

- ಆರು-ಏಳನೆ ವರ್ಷಗಳು - ] ರಾಜಸೂಯ ಯಾಗ & ತೆರಿಗೆಗಳ ಇಳಿಕೆ
- ಎಂಟನೇ ವರ್ಷ - ರಾಜಗೃದ ಮೇಲೆ ದಾಳಿ – ಡೆಮಿಟ್ರಿಯಸ್ ನನ್ನು ಮಥುರಾವರೆಗೂ ಓಡಿಸಿದ
- ಒಂಭತ್ತನೇ ವರ್ಷ - ಮಹಾವಿಜಯ ಅರಮನೆಯ ನಿರ್ಮಾಣ, ಉದಾರ ದಾನಗೆಳ ನೀಡಿಕೆ
- ೧೦ ರಿಂದ ೧೩ನೆ ವರ್ಷಗಳು - ಮಗಧದ ಮೇಲೆ ದಾಳಿ- ಬೃಹಸ್ಪತಿ ಮಿತ್ರನ ವಿರುದ್ಧ ಗೆಲುವು. ಜೈನ ವಿಗ್ರಹಗಳ ವಶ
- ೧೫ನೇ ವರ್ಷ - ಜೈನ ಸಮ್ಮೇಳನದ ಆಯೋಜನೆ; ಜೈನ ಧರ್ಮಶಾಸ್ತ್ರಗಳ ರಚನೆಗೆ ಪ್ರೋತ್ಸಾಹ

# ಗಮನಿಸಿರಿ

- ಇವನು ಜೈನ ಮತಾವಲಂಬಿ
- ಕಂದಗಿರಿ & ಉದಯಗಿರಿಗಳಲ್ಲಿ ಜೈನರಿಗೆ ಗುಹಾಲಯಗಳ ನಿರ್ಮಾಣ ಮಾಡಿಸಿದನು
- ಆಗ್ನೇಯ ಏಷ್ಯಾದಲ್ಲಿ ಭಾರತೀಯ ಸಂಸ್ಕೃತಿಯ ಪ್ರಚಾರಕ್ಕೆ ಆದ್ಯತೆ
- ಇವನ ಕಾಲದಲ್ಲಿ ಈ ಮನೆತನ ತನ್ನ ಕೀರ್ತಿಯ ಉತ್ತುಂಗ ತಲುಪಿತ್ತು
- ಆದರೆ ಉತ್ತರಾಧಿಕಾರಿಗಳು ಸಮರ್ಥರಲ್ಲದ ಕಾರಣ ಬಹುಬೇಗ ತನ್ನ ಅಸ್ಥಿತ್ವ ಕಳೆದುಕೊಂಡಿತು